# ದೂರಶಿಕ್ಷಣ ನಿರ್ದೇಶನಾಲಯ

## ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೭೬

## Directorate of Distance Education

## Kannada University, Hampi-583276

# ಜನಸಾಮಾನ್ಯರಿಗೆ ಉನ್ನತ ಶಿಕ್ಷಣ

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯವು 2019-20ನೇ ಸಾಲಿಗಾಗಿ ಈ ಕೆಳಗಿನ ಕೋರ್ಸ್‌ಗಳಿಗೆ ಅರ್ಹರಿಂದ ಪ್ರವೇಶ ಅರ್ಜಿ ಆಹ್ವಾನಿಸಲಾಗಿದೆ.

**2.1** ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕಾರ್ಯಕ್ರಮ ಅಡಿಯಲ್ಲಿಯ ಶಿಕ್ಷಣಕ್ರಮಗಳು
(ಪ್ರವೇಶಾರ್ಹತೆ : ಯಾವುದೇ ಪದವಿ/SSLC)

| ಕ್ರ ಸಂ | ಶಿಕ್ಷಣಕ್ರಮ | ಕೋಡ್ ಸಂಖ್ಯೆ |
|---|---|---|
| 1. | ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ | 04 |
| **2.** | **ಪತ್ರಿಕೋದ್ಯಮ ಅಧ್ಯಯನ** | **08** |
| 3. | ನಾಟಕ ಕಲೆ | 11 |
| 4. | ಕನ್ನಡ ಸಾಹಿತ್ಯ | 16 |
| 5. | ಶಾಸನಶಾಸ್ತ್ರ ಅಧ್ಯಯನ | 19 |

**2.1.1** **ಶಿಕ್ಷಣದ ಅವಧಿ**

ಯಾವುದೇ ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕೋರ್ಸ್‌ನ್ನು ಪೂರ್ಣಗೊಳಿಸಲು ಇರುವ ಕನಿಷ್ಠ ಅವಧಿ ಒಂದು ವರ್ಷಗಳು. ಗರಿಷ್ಠ ಅವಧಿ ನಿರ್ದಿಷ್ಟ ಶಿಕ್ಷಣಕ್ಕೆ ಸೇರಿದ ವರ್ಷದಿಂದ ಎರಡು ವರ್ಷಗಳು ಮಾತ್ರ. ಎರಡು ವರ್ಷಗಳ ಒಳಗೆ ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕೋರ್ಸ್‌ನ್ನು ಪೂರ್ಣಗೊಳಿಸದ ಅಭ್ಯರ್ಥಿ ಮತ್ತೆ ಹೊಸದಾಗಿ ಪ್ರವೇಶ ಪಡೆಯಬೇಕಾಗುತ್ತದೆ.

**2.1.2** **ಪ್ರವೇಶ ಶುಲ್ಕ ***

| ನಿಯಮ-1 ಮತ್ತು 2 | ಶುಲ್ಕ |
|---|---|
| ನೋಂದಣಿ ಶುಲ್ಕ – | ರೂ.1,000/- |
| ಪ್ರವೇಶ ಶುಲ್ಕ | ರೂ.2,000/- |
| ಕಲಿಕಾ ಸಾಮಗ್ರಿ ಶುಲ್ಕ | ರೂ.3,000/- |
| ಕೋರ್ಸ್/ಬೋಧನಾ ಶುಲ್ಕ | ರೂ.2,000/- |
| ಪರೀಕ್ಷಾ ಶುಲ್ಕ | ರೂ.1,000/- |
| ಹೊರ ರಾಜ್ಯದ ಪದವೀಧರರ ಅರ್ಹತಾ ಶುಲ್ಕ (ಹೊರರಾಜ್ಯದವರಿಗೆ ಮಾತ್ರ) | ರೂ.5,000/- |
| **ಒಟ್ಟು ಮೊತ್ತ** | **ರೂ.14,000/-** |

** ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಎಸ್.ಎಸ್.ಪಿ. ಶಿಷ್ಯವೇತನ ಪೋರ್ಟಲ್ ತಂತ್ರಾಂಶದ ಮೂಲಕ ಶುಲ್ಕ ಮರುಪಾವತಿ ಪಡೆಯಲು ಮತ್ತು ವಿಕಲಾಂಗ ಚೇತನ ವಿದ್ಯಾರ್ಥಿಗಳು ಸಂಬಂಧಪಟ್ಟ ಇಲಾಖೆಯ ನಿಯಮಗಳಂತೆ ಶುಲ್ಕ ಮರುಪಾವತಿ ಪಡೆಯಲು ಅವಕಾಶವಿರುತ್ತದೆ.*

**2.1.3 ಪರೀಕ್ಷಾ ಶುಲ್ಕ**

| ವಿವರಗಳು | ಶುಲ್ಕ |
|---|---|
| ಎಲ್ಲಾ ಕೋರ್ಸ್‌ನ ಎಲ್ಲಾ ಪತ್ರಿಕೆಗಳಿಗೆ | ರೂ.1000/- |
| ಒಂದು ಕೋರ್ಸ್‌ನ ಒಂದು ಪತ್ರಿಕೆಗೆ | ರೂ.200/- |
| ಪುನರ್ ಪರೀಕ್ಷೆ ಒಂದು ಕೋರ್ಸ್‌ನ ಒಂದು ಪತ್ರಿಕೆಗೆ | ರೂ.200/- |

**2.1.4 ಸಾಮಾನ್ಯ ನಿಯಮ**

ಎಲ್ಲಾ ಸ್ನಾತಕೋತ್ತರ ಡಿಪ್ಲೊಮ ಕೋರ್ಸ್‌ಗಳ ಪತ್ರಿಕೆ A ಯಿಂದ Dವರೆಗಿನ ಪ್ರತಿ ಕೋರ್ಸ್(ಪತ್ರಿಕೆ)ನಲ್ಲಿ ೧೦ ಅಂಕಗಳು ಆಂತರಿಕ ಮೌಲ್ಯಮಾಪನಕ್ಕಾಗಿ ಅಂದರೆ ಸಂಪರ್ಕ ಕಾರ್ಯಕ್ರಮ ಹಾಗೂ ಮೌಖಿಕ ಪರೀಕ್ಷೆ ಅಥವಾ ಗೃಹಲೇಖನಕ್ಕಾಗಿ ಸಾಮಾನ್ಯವಾಗಿ ಕಾಯ್ದಿರಿಸಲಾಗಿದೆ. ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದವರು ಈ ೪ ಕೋರ್ಸ್(ಪತ್ರಿಕೆ)ಗಳಲ್ಲಿ ತಲಾ ೧೦ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪಡೆಯಲು ಎ೪ ಅಳತೆಯ ಕನಿಷ್ಠ ೧೦ ಪುಟಗಳ ೨ ಗೃಹಲೇಖನವನ್ನು ದೂರಶಿಕ್ಷಣ ನಿರ್ದೇಶನಾಲಯದ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮಾರ್ಗಸೂಚಿಯ ಮೇರೆಗೆ ಆಯಾ ಕೋರ್ಸ್(ಪತ್ರಿಕೆ)ಗಳಲ್ಲಿಯ ಅಂಶಗಳನ್ನು ಓದಿ ಮನನಮಾಡಿಕೊಂಡು ಸ್ವಹಸ್ತದಿಂದ ಬರೆದು ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇನ್ನುಳಿದಂತೆ ಎಲ್ಲ ಸ್ನಾತಕೋತ್ತರ ಡಿಪ್ಲೊಮ ಶಿಕ್ಷಣಕ್ರಮದ ಕೋರ್ಸ್‌ನ ಪತ್ರಿಕೆ Aಯಿಂದ Dವರೆಗಿನ ಪ್ರತಿ ಕೋರ್ಸ್(ಪತ್ರಿಕೆ)ನಲ್ಲಿ ತಲಾ ೮೦ ಅಂಕಗಳ ೩ ಗಂಟೆ ಅವಧಿಯ ಲಿಖಿತ ವಾರ್ಷಿಕ ಪರೀಕ್ಷೆ ಕಡ್ಡಾಯ. ಉತ್ತೀರ್ಣ ಹೊಂದಲು ಪ್ರತಿ ಕೋರ್ಸ್‌ನಲ್ಲಿ ಆಂತರಿಕ ಅಂಕಗಳನ್ನು ಸೇರಿ ಸರಾಸರಿ ೪೦% ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಡಿಪ್ಲೊಮದ ಎರಡು ಪತ್ರಿಕೆಗಳು ಈ ಸಾಮಾನ್ಯ ನಿಯಮಕ್ಕೆ ಅನ್ವಯಿಸುತ್ತವೆ. ಉಳಿದಂತೆ ಇರುವ ೩,೪,೫ರ ಪತ್ರಿಕೆಗೂ (ಲಿಖಿತ ಮತ್ತು ಆಂತರಿಕ ಅಂಕಗಳು ಸೇರಿದಂತೆ) ಮೇಲಿನ ನಿಯಮವೇ ಅನ್ವಯಿಸುತ್ತದೆ.